ಮಾಡ್ಬೇಕು?'

'ದಾಕ್ಷಿಣ್ಯಕ್ಕೆ ಬಸುರಾದ್ರೆ ಹೆರೋಕೆ ಜಾಗ ಇಲ್ಲ ಅಂತಾರಲ್ಲ, ಕೇಳಿಲ್ವಾ ಗಾದೆ?'

'ಗೊತ್ತು ಮಾರಾಯ್ತಾ, ಅರ್ಥ ಆಯ್ತು ನಂಗೆ...'

ಅದೇನು ಹೇಳಿದಳೋ, ಕೇಳಿದಳೋ ದೊಡ್ಡ ಮೊತ್ತದ ಬಿಲ್ ಬರುವುದು ಆಮೇಲಿಂದ ನಿಂತು ಹೋಯ್ತು. ಸಂಬಂಧ ಇರಲಿ, ಇಲ್ಲದಿರಲಿ, ಯಾವುದಕ್ಕೆ ಯಾವುದೋ ಕೊಂಡಿ ಜೋಡಿಸಿಕೊಂಡು ಚಿಕ್ಕಪುಟ್ಟ ನಗಣ್ಯ ಸಂಗತಿಗಳೂ ನೆನಪಿನಾಳದಿಂದ ಹೀಗೆ ಮೇಲೆದ್ದು ಬರುವುದು ವಿಚಿತ್ರ, ಆದರೂ ನಿಜ. 'ನೆನಪು ಸಾಯುವುದಿಲ್ಲ' ಎಂದು ಸುಮ್ಮನೆ ಹೇಳುತ್ತಾರಾ? ಮನುಷ್ಯ ಸಾಯುವವರೆಗೆ ಅವು ಶಾಶ್ವತ. ಹೀಗೆಂದುಕೊಂಡಿದ್ದ ಚಿದಾನಂದ.

***

ಸತ್ಯಭಾಮ ಮನಸ್ಸಿನೊಳಗೆ ಏನನ್ನು ಮುಚ್ಚಿಟ್ಟುಕೊಂಡು ಕೊರಗು ಹಚ್ಚಿಕೊಂಡಿದ್ದಾಳೆಂಬ ಸತ್ಯ ಬಯಲಾಗಲು ಬಹು ಕಾಲ ಹಿಡಿಯಲಿಲ್ಲ. ಯಾವುದೋ ವಿಷಯ ಮನಸ್ಸನ್ನು ಗಾಢವಾಗಿ ತಟ್ಟಿದ್ದರೆ, ಸದಾ ಕೊರೆಯುತ್ತಿದ್ದರೆ, ಮಾತಿನ ಮೂಲಕ ಹೊರಹರಿವು ಕಂಡುಕೊಳ್ಳಲು ಅದು ತವಕಿಸುತ್ತಿರುತ್ತದೆ ಎನ್ನುವಂತೆ ತಮ್ಮ ಭಾರ್ಗವನೊಡನೆ ಮಾತಾಡುವಾಗ ಪರೋಕ್ಷವಾಗಿ ಅವಳ ಆತಂಕ ನುಸುಳಿಬಿಡುತ್ತಿತ್ತು. ಭಾರ್ಗವ ಪೆದ್ದಪ್ಪ. ಅಕ್ಕ ಹೇಳಿದ್ದೆಲ್ಲಾ ಅರ್ಥವಾಗುವುದಿಲ್ಲ. ಅರ್ಥ ಮಾಡಿಕೊಳ್ಳುವ ವಯಸ್ಸೂ ಅಲ್ಲ. ಆದರೂ ದೊಡ್ಡಮನುಷ್ಯನಂತೆ ಅವಳು ಹೇಳಿದ್ದಕ್ಕೆ ಕಿವಿಯಾಗುತ್ತಾನೆ. ಅಮ್ಮನ ಅಗಲಿಕೆಯ ನಂತರದ ಆತ್ಮೀಯ ಸಾಮೀಪ್ಯದ ಹಂಬಲವನ್ನು ಅವನಿಗೇ ಅರಿವಿಲ್ಲದೆ ಪೂರೈಸಿಕೊಳ್ಳುತ್ತಾನೆ.

ಅವತ್ತು ಭಾನುವಾರ. ಬೆಳಗಿನ ತಿಂಡಿಗೆ ಚಿತ್ರಾನ್ನ ಮಾಡುತ್ತಿದ್ದಳು ಭಾಮ. ಅನ್ನದ ತಿಂಡಿ ಆದರೆ ಮೂರು ಹೊತ್ತೂ ಒದಗಿ ಬರುತ್ತದೆ ಎನ್ನುವ ಕಾರಣದಿಂದ ಸುನಂದೆಯ ಮರಣದ ನಂತರ, ರಜಾದಿನಗಳಲ್ಲಿ ಇಂಥಾ ತಿಂಡಿ ಮಾಡುವುದು ಆ ಮನೆಯಲ್ಲಿ ಸಾಮಾನ್ಯ ಎನ್ನುವಂತಾಗಿತ್ತು.

ರಜಾ ಬಂದರೆ ಭಾಮನಿಗೆ ಕೆಲಸ ಜಾಸ್ತಿ. ಪಾತ್ರೆ, ಬಟ್ಟೆ, ಗುಡಿಸು, ವರೆಸು ಎಂದು ಹೊರಗಿನ ಕೆಲಸಕ್ಕೆ ಹೆಂಗಸೊಬ್ಬಳು ಬರುತ್ತಿದ್ದರೂ ಒಗೆಯಬೇಕಾದ ಬಟ್ಟೆಬರೆಗಳನ್ನು ಹುಡುಕಿ ಒಗೆಯಲು ಹಾಕುವುದು ಅವಳ ಜವಾಬ್ದಾರಿ. ಹಾಸಿಗೆಯ ಮೇಲ್ವಾಸು ಕೊಳೆಯಾಗಿದ್ದರೆ ಅದನ್ನೂ. ಒಗೆದು ಒಣಗಿಸಿಟ್ಟ ಬಟ್ಟೆಗಳನ್ನು ಎಣಿಸಿಕೊಟ್ಟರೆ ಡೋಬಿ ಅಂಗಡಿಗೆ ಹೋಗಿ ಇಸ್ತ್ರಿ ಮಾಡಲು ಕೊಟ್ಟು ಬರುತ್ತಾನೆ ಭಾರ್ಗವ. ಸಂಜೆ ವಾಪಸು ತೆಗೆದುಕೊಂಡು ಬರುವುದೂ ಅವನದೇ ಕೆಲಸ. ಬ್ಯಾಂಕಿನಲ್ಲಿ ದೊಡ್ಡ ಹುದ್ದೆಯಲ್ಲಿರುವ ಅಪ್ಪ ಹೇಗೆ ಹೇಗೋ ಹೊರಬೀಳುವುದು ತಕ್ಕುದಲ್ಲ ಎಂದು ಅರ್ಥ ಮಾಡಿಕೊಂಡಿದ್ದಳು ಹುಡುಗಿ. ಹ್ಯಾಂಗರಿನಲ್ಲಿ ನೇತಾಡುವ ಶರ್ಟುಗಳಲ್ಲಿ ಯಾವುದನ್ನು ಒಗೆಯಲು ಹಾಕಬೇಕೆಂದು ನೋಡಲು ಅಮ್ಮ ಮಾಡುತ್ತಿದ್ದಂತೆ ಯಾವುದರಲ್ಲಿ ಬೆವರ ವಾಸನೆ ಬರುತ್ತಿದೆಯೆಂದು ಕಂಕುಳ ಭಾಗದಲ್ಲಿ ಮೂಸಿ ನೋಡಿ, ಪೇಟೆಮಂದಿಯ ಬಟ್ಟೆ ಕೊಳೆಯಾಗುವುದು ಎಲ್ಲಿ? ಕಂಕುಳಲ್ಲಿ, ಕಾಲರಿನಲ್ಲಿ.

## ಕಳೆದ ಸಂಚಿಕೆಯಲ್ಲಿ



ಮದುವೆಯ ಪ್ರಸ್ತಾಪ ಬಂದಾಗ ಚಿದಾನಂದನ ರೂಪಕ್ಕಿಂತಲೂ ಅವನ ಬ್ಯಾಂಕ್ ನೌಕರಿಗೇ ಹೆಚ್ಚಿನ ಒತ್ತು ಕೊಟ್ಟಿದ್ದ ಸುನಂದಾಳ ಲೆಕ್ಕಾಚಾರ ತಪ್ಪಾಗಿರಲಿಲ್ಲ. ಚಿದಾನಂದ ಅವಳನ್ನು ರಾಣಿಯಂತೆ ನೋಡಿಕೊಂಡಿದ್ದ. ಭಾಮ ಮತ್ತು ಭಾರ್ಗವ ಮಡಿಲು ತುಂಬಿ ಸುನಂದಾಳ ಸಂಸಾರ ಆನಂದಸಾಗರದಂತಿತ್ತು. ಆ ಸುಖ ಸಂಸಾರದಲ್ಲಿ ಚಂಡಮಾರುತದಂತೆ ಕಾಣಿಸಿಕೊಂಡಿದ್ದು ಕ್ಯಾನ್ಸರ್! ಸ್ತನದ ಕ್ಯಾನ್ಸರ್ ಸುನಂದಾಳನ್ನು ಬಲಿ ತೆಗೆದುಕೊಂಡು, ಚಿದಾನಂದನ ಸಂಸಾರವನ್ನು ತತ್ತರಗೊಳಿಸಿತು. ಸ್ಥಿಮಿತ ಕಳೆದುಕೊಳ್ಳದ ಚಿದಾನಂದ ಅಮ್ಮನ ಕೊರತೆ ಕಾಡದಂತೆ ಮಕ್ಕಳನ್ನು ಬೆಳೆಸಲು ತನ್ನೆಲ್ಲ ಪ್ರಯತ್ನ ಮಾಡತೊಡಗಿದ. ಭಾಮ ಕೂಡ ಬಾಲ್ಯದ ಹುಡುಗಾಟ ಬಿಟ್ಟು ಕುಟುಂಬದ ಜವಾಬ್ದಾರಿ ತೆಗೆದುಕೊಂಡಳು. ಹೀಗೆ ಕುಟುಂಬದ ಪಥ ಸಾಗುತ್ತಿರಬೇಕಾದರೆ, ಹೊಸ ಸಂಬಂಧದ ಪ್ರಸ್ತಾಪದೊಂದಿಗೆ ಸುನಂದಾಳ ತಮ್ಮ ಹಾಜರಾಗಿದ್ದ. ಮರುಮಾತಿಗೆ ಅವಕಾಶವಿಲ್ಲದಂತೆ ಮರು ಮದುವೆಯ ಪ್ರಸ್ತಾಪವನ್ನು ಚಿದಾನಂದ ನಿರಾಕರಿಸಿದ್ದರೂ, ಬಾವನೆಂಟ ಮದುವೆಯ ಮಾತನ್ನು ಮುಕ್ತವಾಗಿಯೇ ಇರಿಸಿದ್ದ.

ಅಮ್ಮ ಇದ್ದಾಗ ಥಳಥಳ ಎನ್ನುವಂತಿರುತ್ತಿದ್ದ ಅಡುಗೆಮನೆ ದಿನಾ ವಿಚಾರಿಸಿಕೊಳ್ಳುವವರಿಲ್ಲದೆ ಗಬ್ಬೆದ್ದು ಹೋಗಿರುತ್ತಿತ್ತು. ಒಗ್ಗರಣೆಯ ಜಿಡ್ಡು ಹಾರಿ, ಹಾಲು ಉಕ್ಕಿ ಕರೆಗಟ್ಟಿರುತ್ತಿದ್ದ ಸ್ಟೌವನ್ನು ಉಜ್ಜಿ ವರೆಸುವುದಕ್ಕೂ ಬಿಡುವು ಭಾನುವಾರ ಬಂದಾಗ ಮಾತ್ರ. ಒಲೆಯ, ಒಲೆಯ ಹಿಂದಿನ ಟೈಲ್ಸ್ ಕೂರಿಸಿದ ಗೋಡೆಯ ಮೇಲಿನ ಕರೆಗಳನ್ನು ತೆಗೆಯುವಷ್ಟರಲ್ಲಿ ಸೋತು ಹೋಗುತ್ತಿತ್ತು ಕೈ. ಆದರೂ ಅಮ್ಮ ಮಾಡಿದಷ್ಟು ಚೊಕ್ಕ ಆಗಲಿಲ್ಲವೆಂದು ಒಂದಲ್ಪ ಅಸಮಾಧಾನ. ಅಕ್ಕ ಮಾಡುವ ಕೆಲಸದತ್ತ ಆಗೀಗ ಕಣ್ಣು ಹಾಯಿಸುತ್ತಾ ಅಡುಗೆಕಟ್ಟೆಯ ಖಾಲಿ ಜಾಗದಲ್ಲಿ ಕೂತು ಮಣಮಣ ಏನೋ ಓದಿಕೊಳ್ಳುತ್ತಿರುತ್ತಿದ್ದ ಭಾರ್ಗವ.

'ರೂಮಲ್ಲಿ ಕೂತ್ಗೊಂಡು ಓದೋಕಾಗಲ್ವೇನೋ?' ಕೇಳುತ್ತಿದ್ದಳು ಅಕ್ಕ.

'ಇಲ್ಲೇ ಓದಿದ್ರೆ ಏನಾಗುತ್ತೆ?'

'ಏನಾಗಲ್ಲ ಬಿಡು, ಓದ್ಕೋ...'

'ಓದ್ಕೊಂಡ್ರಾಯ್ತು..'

'ಮತ್ತ್ಯಾಕೆ ಕೈಲಿ ಪುಸ್ತಕ? ಚಂದಕ್ಕಾ?'

'ಹೋಗೇ, ಓದ್ಕೋತಿದ್ದೆ ನಾನು. ನೀನೇ ಮಧ್ಯ ಮಾತಾಡಿಸಿದ್ದು'.

ಚಿತ್ರಾನ್ನಕ್ಕೆ ಒಗ್ಗರಣೆ ಹಾಕಲು ಎಣ್ಣೆ ಬಿಸಿಗಿಟ್ಟಳು ಭಾಮ. 'ಕಡ್ಲೆಕಾಯಿ ಜಾಸ್ತಿ ಹಾಕು...' ತಮ್ಮನ ಅಪ್ಪಣೆಯಾಯ್ತು.

'ಹೂಂ'

'ಬೆಳ್ಳುಳ್ಳೀನೂ ಹಾಕೇ, ಚೆನ್ನಾಗಿರುತ್ತೆ'.

'ಬಾಯಿ ರುಚಿಗೆ ಕಮ್ಮಿ ಇಲ್ಲ ನಿಂಗೆ. ಓದ್ಕೋ ಅಂದ್ರೆ ಪುಸ್ತಕ ಬಿಟ್ಟು ಮತ್ತೆಲ್ಲಾ ಕಡೆ ಗಮನ ಇರುತ್ತೆ...'

'...'

ಒಗ್ಗರಣೆ ಮಾಡಿ, ತಣಿಯಲು ಬಿಟ್ಟಿದ್ದ ಅನ್ನಕ್ಕೆ ಹಾಕಿ ಕಲಸುತ್ತಾ ಥೇಟ್ ತನ್ನಮ್ಮನಂತೆ ಹೇಳಿದಳು ಭಾಮ,

'ಉಪ್ಪು ಸಾಕಾ ನೋಡೋ...'

ಅಕ್ಕ ಅಷ್ಟು ಹೇಳಿದ್ದೇ ತಡ ಪುಸ್ತಕ ಮುಚ್ಚಿ ಬದಿಗಿಟ್ಟು ಬಂದು ಕಲಸಿದ ಅನ್ನಕ್ಕೆ ಕೈ ಹಾಕಿದ ಹುಡುಗ. ಈ ಹೊತ್ತಲ್ಲಿ ಸ್ನಾನಕ್ಕೆ ಹೊರಟಿದ್ದ ಚಿದಾನಂದ ಅಡುಗೆಮನೆ ಬಾಗಿಲಲ್ಲಿ ನಿಂತು ಹೇಳಿದ,

'ಸ್ನಾನ ಮಾಡ್ಕೊಂಡು ಬರ್ತೀನಿ ಆಯ್ತಾ?'

'ಹೂಂ ಅಪ್ಪಾ. ತಿಂಡಿ ರೆಡೀ ಉಂಟು. ಬೇಗ ಬನ್ನಿ...'

'ಹಸಿವಾದ್ರೆ ನೀವಿಬ್ರೂ ತಿನ್ನಿ, ನಂಗೆ ಕಾಯ್ತಾ ಕೂತ್ಗಂಬೇಡಿ'.

'ನಿನ್ನ ಸ್ನಾನ ಆಗ್ಲಿ. ಒಟ್ಟಿಗೆ ತಿಂದ್ರಾಯ್ತು...'

ಅಪ್ಪ ಸ್ನಾನಕ್ಕೆ ಹೋಗುತ್ತಿದ್ದಂತೆ ಭಾಮನಿಗೆ ನಾಲಿಗೆ ತುರಿಸಲು ಶುರುವಾಗಿದ್ದು ಯಾಕೋ?

'ನಾನು ಚೆನ್ನಾಗಿ ಅಡುಗೆ ಮಾಡಲ್ವೇನೋ?' ಕೇಳಿದಳು ತಮ್ಮನನ್ನು.

'ಮಾಡ್ತೀಯಲ್ಲ...'

'ತಿಂಡಿ?'

'ಚಿತ್ರಾನ್ನ ಸೂಪರ್, ಅಮ್ಮ ಮಾಡಿದ ಹಾಗೇ'

'ಅಮ್ಮ ಇಲ್ಲ ಅಂತ ನಿಂಗೇನಾದ್ರೂ ಕಮ್ಮಿ ಆಗಿದ್ಯಾ?'

'ಇಲ್ಲಪ್ಪಾ'

'ಮಕ್ಕಳಿಗೆ ಕಷ್ಟ ಆಗುತ್ತೆ ಅಂತ ನೆಪ ಹೇಳಿ ಮತ್ತ್ಯಾಕೆ ಗಂಡಸ್ರು ಮತ್ತೊಂದು ಮದುವೆ ಆಗ್ತಾರೆ?'

'ಯಾರೇ?'

'ನಮ್ಮ ಹಾಗೇ ನನ್ನ ಫ್ರೆಂಡ್ ಒಬ್ಬಳ ಅಮ್ಮ ಸತ್ಹೋದ್ರು ಕಣೋ. ಅವರ ಅಪ್ಪ ಮತ್ತೊಂದು ಮದುವೆ ಮಾಡ್ಕೋತಾರಂತೆ...'

'ಯಾವ ಫ್ರೆಂಡೇ?'

'ನಿಂಗೊತ್ತಿಲ್ಲ ಬಿಡು. ಮದುವೆ ಮಾಡ್ಕೋ ಅಂತ